# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ, ತುಮಕೂರು-572 103☎:0816-2255650, 2273511,ಫ್ಯಾಕ್ಸ್ :0816-2270719


ಸಂಖ್ಯೆ : ತು.ವಿ.: ಪ.ವಿ.:2023-24/ 1465 ದಿನಾಂಕ: 02.09.2023

## ಅಧಿಸೂಚನೆ

ವಿಷಯ: ಸ್ನಾತಕೋತ್ತರ ಪದವಿಯ ಪ್ರಥಮ ಮತ್ತು ತೃತೀಯ (ನವೀನ ಮತ್ತು ಪೂರಕ) ಸೆಮಿಸ್ಟರ್ ಪರೀಕ್ಷೆಗಳ (CBCS) ಉತ್ತರ ಪತ್ರಿಕೆಗಳ ಛಾಲೆಂಜ್ ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವ ಕುರಿತು.

ಉಲ್ಲೇಖ: ಸಂಖ್ಯೆ: ತು.ವಿ.: ಪ.ವಿ.:2022-23/30 ದಿನಾಂಕ: 17.04.2023.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2022-23 ನೇ ಸಾಲಿನ 2023ರ ಏಪ್ರಿಲ್/ಮೇ ರ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕೋತ್ತರ **ಪದವಿಯ ಪ್ರಥಮ ಮತ್ತು ತೃತೀಯ ಸೆಮಿಸ್ಟರ್** (ನವೀನ ಮತ್ತು ಪೂರಕ) (CBCS) ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಈಗಾಗಲೇ ಫಲಿತಾಂಶ ಪ್ರಕಟಿಸಿದ ಎಲ್ಲಾ ವಿಷಯಗಳ ಉತ್ತರ ಪತ್ರಿಕೆಗಳ ಛಾಲೆಂಜ್ ಮೌಲ್ಯಮಾಪನಕ್ಕೆ ಅವಕಾಶ ಕಲ್ಪಿಸಲಾಗಿದ್ದು, (ಎಂ.ಬಿ.ಎ ಮತ್ತು ಎಂ.ಸಿ.ಎ ಹೊರತುಪಡಿಸಿ) ಉತ್ತರ ಪತ್ರಿಕೆಗಳ ಛಾಲೆಂಜ್ ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ವಿದ್ಯಾರ್ಥಿಗಳು ಸಂಬಂಧಪಟ್ಟ ವಿಭಾಗಗಳಲ್ಲಿ/ಕಾಲೇಜುಗಳಲ್ಲಿ ವಿಭಾಗದ ಮುಖ್ಯಸ್ಥರು/ಪ್ರಾಂಶುಪಾಲರ ಮುಖಾಂತರ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವುದು ಮತ್ತು ವಿಭಾಗ/ ಕಾಲೇಜಿನವರು ಸದರಿ ಮಾಹಿತಿಯನ್ನು ಈ ಕೆಳಗೆ ನೀಡಿದ ದಿನಾಂಕದೊಳಗೆ ಕುಲಸಚಿವರು (ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರಿಗೆ ಸಲ್ಲಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

| | |
|---|---|
| **ಛಾಲೆಂಜ್ ಮೌಲ್ಯಮಾಪನದ ಶುಲ್ಕ ಪ್ರತಿ ವಿಷಯಕ್ಕೆ (Per Paper)** | **ರೂ. 1,310-00** |
| ವಿದ್ಯಾರ್ಥಿಗಳು ಛಾಲೆಂಜ್ ಮೌಲ್ಯಮಾಪನಕ್ಕೆ ಕಾಲೇಜು/ವಿಭಾಗದಲ್ಲಿ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ | **11.09.2023** |
| ವಿಭಾಗ/ಕಾಲೇಜಿನವರು ಆನ್‌ಲೈನ್‌ನಲ್ಲಿ ನಮೂದಿಸಲು ಕೊನೆಯ ದಿನಾಂಕ | **14.09.2023** |
| ಛಾಲೆಂಜ್ ಮೌಲ್ಯಮಾಪನಕ್ಕೆ ಸಲ್ಲಿಸಿದ ಅರ್ಜಿಗಳ ವಿವರಗಳನ್ನು ವಿಭಾಗ/ಕಾಲೇಜಿನವರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕಡೆಯ ದಿನಾಂಕ | **16.09.2023** |

**ವಿಶೇಷ ಸೂಚನೆ:-**

- **2021-22 & 2022-23 ನೇ ಶೈಕ್ಷಣಿಕ ಸಾಲಿನ ಪ್ರಥಮ ಮತ್ತು ತೃತೀಯ ಸೆಮಿಸ್ಟರ್** (ನವೀನ ಮತ್ತು ಪೂರಕ) (CBCS) **ಸೆಮಿಸ್ಟರ್ ವಿದ್ಯಾರ್ಥಿಗಳು ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ಶುಲ್ಕ ಪಾವತಿಸತಕ್ಕದ್ದು. ಇತರೆ ವಿದ್ಯಾರ್ಥಿಗಳು ತುಮಕೂರು ವಿಶ್ವವಿದ್ಯಾನಿಲಯ (tumkuruniversity.ac.in) ವೆಬ್‌ಸೈಟ್‌ನಲ್ಲಿ ಎಸ್.ಬಿ.ಐ. ಕಲೆಕ್ಟ್ ಮುಖಾಂತರ ಶುಲ್ಕ ಪಾವತಿಸಿ ಸಂಬಂಧಪಟ್ಟ ವಿಭಾಗ/ಕಾಲೇಜುಗಳಿಗೆ ಸಲ್ಲಿಸುವುದು.**
- **ಛಾಲೆಂಜ್ ಮೌಲ್ಯಮಾಪನದಲ್ಲಿ ಪಡೆದ ಅಂಕಗಳೇ ಅಂತಿಮವಾಗಿರುತ್ತದೆ. ಕಡೆಯ ದಿನಾಂಕದ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.**

ಕುಲಸಚಿವರು(ಪರೀಕ್ಷಾಂಗ)

ಗೆ,

**ನಿರ್ದೇಶಕರು / ಮುಖ್ಯಸ್ಥರು/ಸಂಯೋಜಕರು/ಪ್ರಾಂಶುಪಾಲರು/ ವಿವಿಧ ಸ್ನಾತಕೋತ್ತರ ವಿಭಾಗಗಳು ಮತ್ತು ವಿವಿಧ ಸ್ನಾತಕೋತ್ತರ ಸಂಯೋಜಿತ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.**

**ಪ್ರತಿಗಳು:**

1. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಸಿಸ್ಟಂ ಅನಾಲಿಸಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಕಛೇರಿ ಪ್ರತಿ.